## ದಿನಾಂಕ:07–02–2014 ರಂದು ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಂಡ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರು<br>ಶ್ರೀಯುತರಾದ : | | | ಹಾಜರಿದ್ದ ಅಧಿಕಾರಿಗಳು<br>ಶ್ರೀಯುತರಾದ | |
|---|---|---|---|---|
| 1 | **ಎಂ.ಮುನಿರಾಜು** | ಅಧ್ಯಕ್ಷರು | 1 | ಕೌನ್ಸಿಲ್ ಕಾರ್ಯದರ್ಶಿ |
| 2 | **ಎಸ್.ಹೆಚ್.ಪದ್ಮರಾಜ್** | ಸದಸ್ಯರು | 2 | ಉಪ ಅರಣ್ಯ ಸಂರಕ್ಷಣಾಧಿಕಾರಿ |
| 3 | **ಎಂ.ಸಿ.ಶ್ರೀನಿವಾಸ್** | ಸದಸ್ಯರು | 3 | ವಲಯ ಅರಣ್ಯಾಧಿಕಾರಿಗಳು (ಪೂರ್ವ/ ಪಶ್ಚಿಮ/ ದಕ್ಷಿಣ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ ರಾಜರಾಜೇಶ್ವರಿನಗರ) |
| 4 | **ಆರ್.ಪಿ.ಶಶಿ** | ಸದಸ್ಯರು | | |
| 5 | **ಪುಟ್ಟಮ್ಮ** | ಸದಸ್ಯರು | 4 | ತೋಟಗಾರಿಕೆ ಅಧೀಕ್ಷಕರು (ಪೂರ್ವ/ಪಶ್ಚಿಮ/ದಕ್ಷಿಣ/ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ರಾಜರಾಜೇಶ್ವರಿನಗರ) |
| 6 | **ವಿಜಯ ಎಸ್.ಎಸ್.ಪ್ರಸಾದ್** | ಸದಸ್ಯರು | | |
| 7 | **ಎಸ್.ಗಂಗಾಧರ್** | ಸದಸ್ಯರು | 5 | ಕಾ.ಪಾ.ಅ.(ಯೋಜನೆ–ದಾಸರಹಳ್ಳಿ/ಪೂರ್ವ/ಪಶ್ಚಿಮ/ರಾಜರಾಜೇಶ್ವರಿನಗರ/ ಮಹದೇವಪುರ |
| 8 | **ಕೆ.ಆರ್.ಯಶೋಧಮ್ಮ** | ಸದಸ್ಯರು | | |
| 9 | **ಪಳನಿಯಮ್ಮಾಳ್** | ಸದಸ್ಯರು | 6 | ಕಾರ್ಯಪಾಲಕ ಅಭಿಯಂತರರು(ಯೋಜನೆ–ಕೆರೆಗಳು) |
| 10 | **ಲಲಿತಾ** | ಸದಸ್ಯರು | | |
| 11 | **ಗೋಪಾಲಕೃಷ್ಣ.ಟಿ** | ಸದಸ್ಯರು | | |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

ಮಾನ್ಯ ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳಿಗೆ ಹೃತ್ಪೂರ್ವಕವಾದ ಸ್ವಾಗತ ಕೋರಿದರು.

ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಅಧ್ಯಕ್ಷರು, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

### 1. ವಿಷಯದ ಸಂಖ್ಯೆ:ತೋ/ಸ್ಥಾ/ಸ/30/13–14, ದಿನಾಂಕ: 20–01–2014

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ದಕ್ಷಿಣ ವಲಯ ವ್ಯಾಪ್ತಿಯ ಬಿ.ಟಿ.ಎಂ.ಲೇಔಟ್ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ.151 ರಲ್ಲಿ, ಈ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲು ಮಾನ್ಯ ಆಯುಕ್ತರು ದೂರವಾಣಿ ಮೂಲಕ ಸೂಚಿಸಿರುತ್ತಾರೆ. ಅದರಂತೆ ಕಾರ್ಯಪಾಲಕ ಅಭಿಯಂತರರು(ಯೋಜನೆ–ದಕ್ಷಿಣ) ರವರು ಈ ಕೆಳಕಂಡ ಕಾಮಗಾರಿಯನ್ನು 2013–14ನೇ ಸಾಲಿನ ಕರ್ನಾಟಕ ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ದರಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ, 2013–14ನೇ ಸಾಲಿನ ಆಯವ್ಯಯದ ಸೂಕ್ತ ಅನುದಾನದ ಅಡಿಯಲ್ಲಿ ಜಾಬ್ ಸಂಖ್ಯೆ ಮತ್ತು ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿ ಕಡತವನ್ನು ಸಲ್ಲಿಸಿರುತ್ತಾರೆ. ಕಾಮಗಾರಿಯ ವಿವರ ಈ ಕೆಳಕಂಡಂತಿವೆ.

| Sl. No. | Name of Work | Amount in Lakhs |
|---|---|---|
| **1.** | Improvements to lakshmi Devi park at 6th block 80 feet Road Koramangala in Ward No.151. | **13.60** |
| | **Total** | **13.60** |

ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ) ವಿಭಾಗರವರು ಸಲ್ಲಿಸಿರುವ ಪ್ರಸ್ತಾವನೆಯಂತೆ, ಈ ಮೇಲ್ಕಂಡ ಕಾಮಗಾರಿಗೆ ಜಾಬ್ ಸಂಖ್ಯೆ ಮತ್ತು ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿರುವ ಪ್ರಸ್ತಾವನೆಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:16–01–2014 ರ ಟಿಪ್ಪಣಿ.

**ನಿರ್ಣಯ:– ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:16–01–2014 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**2. ವಿಷಯದ ಸಂಖ್ಯೆ:ತೋ/ಸ್ಥಾ/ಸ/31/13–14, ದಿನಾಂಕ: 24–01–2014**

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ.106, ಡಾ॥ರಾಜ್ ಕುಮಾರ್ ವಾರ್ಡ್‌ನ ವ್ಯಾಪ್ತಿಯಲ್ಲಿ ಬರುವ ಬುಲೇ ವಾರ್ಡ್‌ನ ಉದ್ಯಾನವನದಲ್ಲಿ ಪಾದಚಾರಿ ಮಾರ್ಗಕ್ಕೆ ಕಾಬಲ್ ಸ್ಟೋನ್ ಅಳವಡಿಸುವುದು, ಎಂ.ಎಸ್.ಗ್ರಿಲ್, ಗೇಟ್ ಅಳವಡಿಸುವುದು, ಫೆನ್ಸಿಂಗ್‌ಗಳಿಗೆ ಹಾಗೂ ಕರ್ಬ್‌ಗಳಿಗೆ ಬಣ್ಣ ಬಳಿಯುವುದು ಹಾಗೂ ಇತ್ಯಾದಿ ಅಂಶಗಳನ್ನು ಅಳವಡಿಸಿಕೊಂಡು ರೂ.4.00 ಲಕ್ಷ ಮೊತ್ತದ ಅಂದಾಜು ಪಟ್ಟಿಯನ್ನು ಕಾ.ಪಾ.ಅ(ಯೋಜನೆ–ದಕ್ಷಿಣ) ವಿಭಾಗದಿಂದ 2010–11ನೇ ಸಾಲಿನ ದರಗಳನ್ವಯ ತಯಾರಿಸಲಾಗಿರುತ್ತದೆ. ಸದರಿ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ಸಂಖ್ಯೆ:ಕಾ.ಪಾ.ಅ/ಯೋ(ದ)/ಆ/ ಮ/15/11–12, ದಿ:16–06–2011 ಮತ್ತು ತಾಂತ್ರಿಕ ಮಂಜೂರಾತಿ ಸಂಖ್ಯೆ:ಕಾ.ಪಾ.ಅ/ಯೋ.ಪ/ತಾ/ ಮ/08/11–12, ದಿ:16–06–2011ರಂತೆ ದೊರೆತಿದ್ದು, ಜಾಬ್ ಕೋಡ್ ಸಂಖ್ಯೆ:106–11–000069 ಆಗಿರುತ್ತದೆ.

ಸದರಿ ಕಾಮಗಾರಿಯನ್ನು ಕಾ.ಪಾ.ಅ(ಯೋ–ದಕ್ಷಿಣ) ವಿಭಾಗದಿಂದ ಇ–ಟೆಂಡರ್ ಮುಖಾಂತರ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಯಶಸ್ವಿ ಗುತ್ತಿಗೆದಾರರಾದ ಶ್ರೀ.ಎಲ್.ಕೃಷ್ಣಮೂರ್ತಿ ರವರಿಗೆ ದಿನಾಂಕ:18–10–2012 ರಂದು ಕಾರ್ಯಾದೇಶ ನೀಡಲಾಗಿದ್ದು, ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸಿ, ಪೂರ್ಣಗೊಳಿಸದೇ ಇರುವ ಕಾರಣ ಕಂಡಿಕೆ(40))ರ ಮಾನ್ಯ ಜಂಟಿ ಆಯುಕ್ತರು(ಪಶ್ಚಿಮ)ರವರ ದಿನಾಂಕ: 07–12–2013ರ ಆದೇಶದಂತೆ ಗುತ್ತಿಗೆದಾರರ ಕಾರ್ಯಾದೇಶವನ್ನು ರದ್ದುಪಡಿಸಿ, ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ.

ಸದರಿ ಕಾಮಗಾರಿಗೆ ಈಗಾಗಲೇ ಜಾಬ್ ಕೋಡ್ ಸಂಕೇತ:106–11–000069 ನೀಡಲಾಗಿದ್ದು, ಸದರಿ ಕಾಮಗಾರಿಯನ್ನು ತಹಲ್‌ವರೆಗೂ ಪ್ರಾರಂಭಿಸದೇ ಇರುವ ಬಗ್ಗೆ ಸದರಿ ವಾರ್ಡ್‌ನ ಸ್ಥಳೀಯ ನಗರ ಸಭಾ ಸದಸ್ಯರಾದ ಶ್ರೀ.ಗಂಗಭೈರಯ್ಯರವರು ಹಲವಾರು ಬಾರಿ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ ಹಾಗೂ ಸಾರ್ವಜನಿಕ ಕೆಲಸಕಾರ್ಯಗಳ ಹಿತದೃಷ್ಠಿಯಿಂದ ಕಾಮಗಾರಿಯನ್ನು ತುರ್ತಾಗಿ ಮೆ॥ಕೆ.ಆರ್.ಐ.ಡಿ.ಎಲ್.ಸಂಸ್ಥೆ ಮುಖಾಂತರ ನಿರ್ವಹಿಸುವುದರ ಬಗ್ಗೆ ಮೌಖಿಕವಾಗಿ ತಿಳಿಸಿರುತ್ತಾರೆ.

ಈ ಮೇಲ್ಕಂಡ ಹಿನ್ನಲೆಯಲ್ಲಿ, Repairs & Painting to existing fencing pathway to the park coming under Ward No.106 ಕಾಮಗಾರಿಯನ್ನು ತುರ್ತಾಗಿ ಮೆ॥ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖಾಂತರ ಕೈಗೊಳ್ಳುವ ಪ್ರಸ್ತಾವನೆಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ:21–01–2014 ರ ಟಿಪ್ಪಣಿ.

| Sl. No. | Name of Work | Amount in Lakhs |
|---|---|---|
| 1. | Repairs & Painting to existing fencing pathway to the park coming under Ward No.106 | 04.00 |

**ನಿರ್ಣಯ:– ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ: 21–01–2014 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**3. ವಿಷಯದ ಸಂಖ್ಯೆ:ತೋ/ಸ್ಥಾ/ಸ/32/13–14, ದಿನಾಂಕ: 29–01–2014**

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ:128, ನಾಗರಭಾವಿ ವ್ಯಾಪ್ತಿಯ ಮಾನಸ ನಗರ ಮತ್ತು ಶಾರದಾ ಉದ್ಯಾನವನದಲ್ಲಿ ಬೆಂಚುಗಳನ್ನು ಅಳವಡಿಸುವುದು ಹಾಗೂ ಮಕ್ಕಳ ಆಟದ ಸಾಮಾನು ಅಳವಡಿಕೆ ಮಾಡಲು ಸ್ಥಳೀಯ ನಗರಸಭಾ ಸದಸ್ಯರು ಪತ್ರ ನೀಡಿರುವುದರಿಂದ, ಸದರಿ ಉದ್ಯಾನವನವನ್ನು ಸ್ಥಳ ಪರಿಶೀಲಿಸಲಾಗಿ, ಮಕ್ಕಳ ಆಟದ ಸಾಮಾನು ಅಳವಡಿಕೆ, ಜಲ್ಲಿ ಮತ್ತು ಕಾಂಕ್ರೀಟ್ ಹಾಕುವುದು, ಗ್ರಾನೈಟ್ ಬೆಂಚುಗಳನ್ನು ಹಾಕುವುದು ಇತ್ಯಾದಿ ಅಂಶಗಳನ್ನು ಅಳವಡಿಸಿಕೊಂಡು ರೂ.3.00 ಲಕ್ಷ ಮೊತ್ತದ ಅಂದಾಜು ಪಟ್ಟಿಯನ್ನು 2012–13ನೇ ಸಾಲಿನ ದರಗಳನ್ವಯ ತಯಾರಿಸಲಾಗಿರುತ್ತದೆ.

ಸದರಿ ಕಾಮಗಾರಿಗೆ ಈಗಾಗಲೇ ಜಾಬ್ ಸಂಕೇತ ಸಂಖ್ಯೆ:128–11–000060 ದೊರೆತಿದ್ದು, ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಲಾಗಿರುತ್ತದೆ. ಶ್ರೀ.ಉಮೇಶ್ ಶೆಟ್ಟಿ, ನಗರಪಾಲಿಕೆ ಸದಸ್ಯರು, ವಾರ್ಡ್ 128 ರವರು ಮಾನ್ಯ ಆಯುಕ್ತರವರಿಗೆ ವಿಳಾಸ ಮಾಡಿರುವ ಪತ್ರದಲ್ಲಿ ಸದರಿ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಬೇಕಾಗಿರುವುದರಿಂದ, ಈ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯವರ ಮುಖಾಂತರ ನಿರ್ವಹಿಸಲು ಅನುಮತಿ ನೀಡಲು ಕೋರಿ ಪತ್ರ ಬರೆದಿರುವುದರಿಂದ ಸದರಿ ಪ್ರಸ್ತಾವನೆಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ: 28–01–2014 ರ ಟಿಪ್ಪಣಿ.

| Sl. No. | Name of Work | Amount in Lakhs |
|---|---|---|
| 1. | Providing and Construction of Plotform with new benches in Ward No.128 | 3.00 |

**ನಿರ್ಣಯ:– ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ:28–01–2014 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**4. ವಿಷಯದ ಸಂಖ್ಯೆ:ತೋ/ಸ್ಥಾ/ಸ/33/13–14, ದಿನಾಂಕ: 29–01–2014**

ನಾಯಂಡಹಳ್ಳಿ ಕೆರೆಯ ಸಮಗ್ರ ಅಭಿವೃದ್ಧಿ ಹಂತ–3ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು–5, ಕೆರೆಗಳು ರವರು ಎರಡನೇ ಕರೆಯಲ್ಲಿ ಇ–ಪ್ರಕ್ಯೂರ್‌ಮೆಂಟ್ ವಿಧಾನದ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 01(ಒಂದು) ಟೆಂಡರ್‌ಗಳು ಸ್ವೀಕೃತವಾಗಿದ್ದು,

ಟೆಂಡರ್‌ದಾರರಾದ ಶ್ರೀ.ಎನ್.ಶ್ರೀನಿವಾಸಮೂರ್ತಿ(ಮೆ॥ಪರಿಚಿತ ಕನ್‌ಸ್ಟ್ರಕ್ಷನ್)ರವರು ತಾಂತ್ರಿಕ ಬಿಡ್‌ನಲ್ಲಿ ಸಿಂಧುವಾಗಿರುತ್ತಾರೆ. ಕಾರ್ಯಪಾಲಕ ಅಬಿಯಂತರರು-5, ಕೆರೆಗಳುರವರು, ಕನಿಷ್ಠ ಟೆಂಡರ್‌ದಾರರಾದ ಶ್ರೀ.ಎನ್.ಶ್ರೀನಿವಾಸಮೂರ್ತಿ (ಮೆ॥ಪರಿಚಿತ ಕನ್‌ಸ್ಟ್ರಕ್ಷನ್) ಗುತ್ತಿಗೆದಾರವರ ಟೆಂಡರ್‌ನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಕಡತದ ಕಂಡಿಕೆ ಸಂಖ್ಯೆ(61) ರಿಂದ(75) ರವರೆಗಿನ ಕಛೇರಿ ಟಿಪ್ಪಣಿಯ ವರದಿಯಲ್ಲಿ ಅವಗಾಹನೆಗೆ ಸಲ್ಲಿಸಲಾಗಿದೆ. ರೂ.302.00 ಲಕ್ಷಗಳ ಅಂದಾಜು ಪಟ್ಟಿಗೆ 2012-13ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಮುಖ್ಯ ಅಭಿಯಂತರರು, ಕೆರೆಗಳುರವರು ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಿದ್ದು, ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ.3,00,74,429.88 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಎನ್.ಶ್ರೀನಿವಾಸಮೂರ್ತಿ(ಮೆ॥ಪರಿಚಿತ ಕನ್‌ಸ್ಟ್ರಕ್ಷನ್) ರವರು ಈ ಕಾಮಗಾರಿಗೆ ನಮೂದಿಸಿದ ಟೆಂಡರ್ ಮೊತ್ತವಾದ ರೂ. 3,00,82,889.00 ಅನುಮೋದಿತ 2012-13ನೇ ಸಾಲಿನ ಲೋಕೋಪಯೋಗಿ ಹಾಗೂ 2010-11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಗೆ ಹೋಲಿಸಿದಾಗ ಶೇಕಡ +0.03% ರಷ್ಟು ಹೆಚ್ಚು ಹಾಗೂ ಪ್ರಸ್ತುತ ಚಾಲನೆಯಲ್ಲಿರುವ 2013-14ನೇ ಸಾಲಿನ ಲೋಕೋಪಯೋಗಿ ಮತ್ತು 2010-11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಗೆ ಹೋಲಿಸಿದಾಗ ಶೇಕಡ -0.65% ರಷ್ಟು ಕಡಿಮೆ ದರಗಳನ್ನು ನಮೂದಿಸಿದ್ದು, ಕನಿಷ್ಟ ಟೆಂಡರ್‌ದಾರರಾಗಿರುತ್ತಾರೆ. ಸದರಿ ಟೆಂಡರ್‌ನ್ನು ಅನುಮೋದಿಸಲು ಮುಖ್ಯ ಅಭಿಯಂತರರು, ಕೆರೆಗಳು ರವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಗಮನಿಸಲಾಗಿ, ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.3,00,82,889.00 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/335/ಎಮ್‌ಎನ್‌ವೈ/2007 (ಭಾ) ದಿನಾಂಕ:11-05-2009 ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯ ಬಾಕಿ ಇಟ್ಟು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆಚ್ಚಿನ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯ ಶಿಫಾರಸ್ಸನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ: ಯು.ಡಿ.ಡಿ/636/ಎಮ್‌ಎನ್‌ವೈ/2010 (ಭಾ) ದಿನಾಂಕ: 02-04-2011 ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6ಕ್ಕೆ ನೀಡಲಾದ ತಿದ್ದುಪಡಿಯನ್ನು ಸರ್ಕಾರವು ಅಂಗೀಕರಿಸಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಎನ್.ಶ್ರೀನಿವಾಸಮೂರ್ತಿ (ಮೆ॥ಪರಿಚಿತ ಕನ್‌ಸ್ಟ್ರಕ್ಷನ್)ರವರು 2012-13ನೇ ಸಾಲಿನ ಲೋಕೋಪಯೋಗಿ ಹಾಗೂ 2010-11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಗೆ ಹೋಲಿಸಿದಾಗ ಶೇಕಡ +0.03% ರಷ್ಟು ಹೆಚ್ಚು ಹಾಗೂ

ಪ್ರಸ್ತುತ ಚಾಲನೆಯಲ್ಲಿರುವ 2013-14ನೇ ಸಾಲಿನ ಲೋಕೋಪಯೋಗಿ ಹಾಗೂ 2010-11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಗೆ ಹೋಲಿಸಿದಾಗ ಶೇಕಡ -0.65% ರಷ್ಟು ಕಡಿಮೆ ನಮೂದಿಸಿರುವ ಮೊತ್ತವಾದ ರೂ.3,00,82,889.00 (ರೂಪಾಯಿ ಮೂರು ಕೋಟಿ ಎಂಭತ್ತೆರಡು ಸಾವಿರದ ಎಂಟು ನೂರ ಎಂಭತ್ತೊಂಭತ್ತು ಮಾತ್ರ) ಗಳ ಟೆಂಡರ್‌ನ ಅನುಮೋದನೆ ಕೋರಿ

ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ:28–01–2014 ರ ಟಿಪ್ಪಣಿ.

**ನಿರ್ಣಯ:– ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ:28–01–2014 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**5. ವಿಷಯದ ಸಂಖ್ಯೆ:ತೋ/ಸ್ಥಾ/ಸ/34/13–14, ದಿನಾಂಕ: 30–01–2014**

ವಾರ್ಡ್ ಸಂಖ್ಯೆ:112ರ ಉದ್ಯಾನವನದ ಅಭಿವೃದ್ಧಿ ಮೊತ್ತ ರೂ.95.00 ಲಕ್ಷಗಳಿಗೆ, 2013–14ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0311ರ ಉದ್ಯಾನವನಗಳ ಅಭಿವೃದ್ಧಿ ಅಡಿ, ಮುಂದುವರೆದ ಕಾಮಗಾರಿಗಳ ಅಡಿಯಲ್ಲಿ ಜಾಬ್‌ಸಂಖ್ಯೆ ನೀಡಲು ವಾರ್ಡ್ ಸಂಖ್ಯೆ:112ರ ಪಾಲಿಕೆ ಸದಸ್ಯರು ತಮ್ಮ ಪತ್ರದಲ್ಲಿ ಕೋರಿರುತ್ತಾರೆ.

2013–14ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ.75ರಲ್ಲಿ ಪಿ0311ರ ಅಡಿಯಲ್ಲಿ ಚಾಲ್ತಿ ಕಾಮಗಾರಿ ಅಡಿಯಲ್ಲಿ ಅನುದಾನ ಮೀಸಲಿಟ್ಟಿರುವುದಿಲ್ಲ. ಮುಂದುವರೆದ ಕಾಮಗಾರಿಗಳ ಅಡಿಯಲ್ಲಿ ರೂ.500.00 ಲಕ್ಷಗಳು, ಬಾಕಿ ಬಿಲ್ಲುಗಳಿಗಾಗಿ ರೂ.660.00ಲಕ್ಷಗಳು ಮೀಸಲಿರುತ್ತದೆ. ಒಟ್ಟಾರೆ ರೂ.1160.00 ಲಕ್ಷಗಳ ಅನುದಾನವನ್ನು ಅಳವಡಿಸಿಕೊಳ್ಳಲಾಗಿದೆ. 2011–12 ಮತ್ತು 2012–13ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0311ರಲ್ಲಿ ರೂ.402.58ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದ್ದು, 2012–13ನೇ ಸಾಲಿನಲ್ಲಿ ಬಾಕಿ ಬಿಲ್ಲುಗಳಿಗೆ ರೂ.660.00ಲಕ್ಷಗಳ ಅನುದಾನ ಮೀಸಲಿರಿಸಿದ್ದು, ಮುಂದುವರೆದ ಕಾಮಗಾರಿಗಳಡಿ ಮೀಸಲಿಟ್ಟಿರುವ ಅನುದಾನ ರೂ.500.00ಲಕ್ಷಗಳಲ್ಲಿ, ರೂ.100.00ಲಕ್ಷಗಳು ಮುಂದುವರೆದ ಕಾಮಗಾರಿ ಗಳಾಗಿದ್ದು, ಉಳಿತಾಯವಾಗುವ ರೂ.400.00ಲಕ್ಷಗಳಲ್ಲಿ ಇಲ್ಲಿಯವರೆಗೆ ರೂ.241.00 ಲಕ್ಷಗಳಿಗೆ ಜಾಬ್ ಸಂಖ್ಯೆ ನೀಡಲಾಗಿದೆ. ಉಳಿಕೆ ರೂ.159.00 ಲಕ್ಷಗಳಲ್ಲಿ ರೂ.95.00ಲಕ್ಷಗಳ ಅನುದಾನವನ್ನು ಭರಿಸಿಕೊಳ್ಳುವ ಬಗ್ಗೆ ಹಾಗೂ ಜಾಬ್‌ಸಂಖ್ಯೆ ನೀಡುವ ಪ್ರಸ್ತಾವನೆಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ:28–01–2014 ರ ಟಿಪ್ಪಣಿ.

**ನಿರ್ಣಯ:– ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ:28–01–2014 ರ ಟಿಪ್ಪಣಿಯನ್ನು ಒಪ್ಪುತ್ತಾ, ಈ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖೇನ ನಿರ್ವಹಿಸಲು ಸಮಿತಿಯು ತೀರ್ಮಾನಿಸಿತು.**

**6. ವಿಷಯದ ಸಂಖ್ಯೆ:ತೋ/ಸ್ಥಾ/ಸ/35/13–14, ದಿನಾಂಕ: 30–01–2014**

ವಾರ್ಡ್ ಸಂಖ್ಯೆ:61ರ ಉದ್ಯಾನವನದ ಅಭಿವೃದ್ಧಿ ಮೊತ್ತ ರೂ.10.00 ಲಕ್ಷಗಳಿಗೆ, 2013–14ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0311ರ ಉದ್ಯಾನವನಗಳ ಅಭಿವೃದ್ಧಿ ಅಡಿ, ಮುಂದುವರೆದ ಕಾಮಗಾರಿಗಳ ಅಡಿಯಲ್ಲಿ ಜಾಬ್‌ಸಂಖ್ಯೆ ನೀಡಲು ವಾರ್ಡ್ ಸಂಖ್ಯೆ:61ರ ಪಾಲಿಕೆ ಸದಸ್ಯರು ತಮ್ಮ ಪತ್ರದಲ್ಲಿ ಕೋರಿರುತ್ತಾರೆ.

2013–14ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ.75ರಲ್ಲಿ ಪಿ0311ರ ಅಡಿಯಲ್ಲಿ ಚಾಲ್ತಿ ಕಾಮಗಾರಿ ಅಡಿಯಲ್ಲಿ ಅನುದಾನ ಮೀಸಲಿಟ್ಟಿರುವುದಿಲ್ಲ. ಮುಂದುವರೆದ ಕಾಮಗಾರಿಗಳ ಅಡಿಯಲ್ಲಿ ರೂ.500.00

ಲಕ್ಷಗಳು, ಬಾಕಿ ಬಿಲ್ಲುಗಳಿಗಾಗಿ ರೂ.660.00ಲಕ್ಷಗಳು ಮೀಸಲಿರುತ್ತದೆ. ಒಟ್ಟಾರೆ ರೂ.1160.00 ಲಕ್ಷಗಳ ಅನುದಾನವನ್ನು ಅಳವಡಿಸಿಕೊಳ್ಳಲಾಗಿದೆ. 2011–12 ಮತ್ತು 2012–13ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0311ರಲ್ಲಿ ರೂ.402.58ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದ್ದು, 2012–13ನೇ ಸಾಲಿನಲ್ಲಿ ಬಾಕಿ ಬಿಲ್ಲುಗಳಿಗೆ ರೂ.660.00ಲಕ್ಷಗಳ ಅನುದಾನ ಮೀಸಲಿರಿಸಿದ್ದು, ಮುಂದುವರೆದ ಕಾಮಗಾರಿಗಳಡಿ ಮೀಸಲಿಟ್ಟಿರುವ ಅನುದಾನ ರೂ.500.00ಲಕ್ಷಗಳಲ್ಲಿ, ರೂ.100.00ಲಕ್ಷಗಳು ಮುಂದುವರೆದ ಕಾಮಗಾರಿ ಗಳಾಗಿದ್ದು, ಉಳಿತಾಯವಾಗುವ ರೂ.400.00 ಲಕ್ಷಗಳಲ್ಲಿ ಇಲ್ಲಿಯವರೆಗೆ ರೂ.336.00ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ. ಉಳಿಕೆ ರೂ.64.00 ಲಕ್ಷಗಳಲ್ಲಿ ರೂ.10.00ಲಕ್ಷಗಳ ಅನುದಾನವನ್ನು ಭರಿಸಿಕೊಳ್ಳುವ ಬಗ್ಗೆ ಹಾಗೂ ಜಾಬ್‌ಸಂಖ್ಯೆ ನೀಡುವ ಪ್ರಸ್ತಾವನೆಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:28–01–2014 ರ ಟಿಪ್ಪಣಿ.

**ನಿರ್ಣಯ:– ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ:28–01–2014 ರ ಟಿಪ್ಪಣಿಯನ್ನು ಒಪ್ಪುತ್ತಾ, ಈ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖೇನ ನಿರ್ವಹಿಸಲು ಸಮಿತಿಯು ತೀರ್ಮಾನಿಸಿತು.**

**7. ವಿಷಯದ ಸಂಖ್ಯೆ:ತೋ/ಸ್ಥಾ/ಸ/36/13–14, ದಿನಾಂಕ: 30–01–2014**

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ:128, ನಾಗರಭಾವಿ ವ್ಯಾಪ್ತಿಯ ಮಾನಸ ನಗರ ಉದ್ಯಾನವನದಲ್ಲಿ ಹೊಸದಾಗಿ ಪಾದಚಾರಿ ಮಾರ್ಗವನ್ನು ಅಭಿವೃದ್ಧಿಪಡಿಸಲು ಸ್ಥಳೀಯ ನಗರಸಭಾ ಸದಸ್ಯರು ಪತ್ರ ನೀಡಿರುವುದರಿಂದ, ಸದರಿ ಉದ್ಯಾನವನವನ್ನು ಸ್ಥಳ ಪರಿಶೀಲಿಸಲಾಗಿ, ಮಣ್ಣು ಅಗೆತ, ಜಲ್ಲಿ ಮತ್ತು ಕಾಂಕ್ರೀಟ್ ಹಾಕುವುದು, ಕರ್ಬ್‌ಗಳಿಗೆ ಬಣ್ಣ ಬಳಿಯುವುದು, ಗ್ರಾನೈಟ್ ಬೆಂಚುಗಳನ್ನು ಹಾಕುವುದು ಮತ್ತು ಕರ್ಬ್ ಸ್ಟೋನ್ ಮತ್ತು ಕಾಬಲ್ ಸ್ಟೋನ್ ಹಾಕುವುದು ಇತ್ಯಾದಿ ಅಂಶಗಳನ್ನು ಅಳವಡಿಸಿಕೊಂಡು ರೂ.5.00 ಲಕ್ಷ ಮೊತ್ತದ ಅಂದಾಜು ಪಟ್ಟಿಯನ್ನು 2012–13ನೇ ಸಾಲಿನ ದರಗಳನ್ವಯ ತಯಾರಿಸಲಾಗಿರುತ್ತದೆ.

ಸದರಿ ಕಾಮಗಾರಿಗೆ ಈಗಾಗಲೇ ಜಾಬ್ ಸಂಕೇತ ಸಂಖ್ಯೆ:128–11–000059 ದೊರೆತಿದ್ದು, ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಲಾಗಿರುತ್ತದೆ. ಶ್ರೀ.ಉಮೇಶ್ ಶೆಟ್ಟಿ, ನಗರಪಾಲಿಕೆ ಸದಸ್ಯರು, ವಾರ್ಡ್ 128 ರವರು ಮಾನ್ಯ ಆಯುಕ್ತರವರಿಗೆ ವಿಳಾಸ ಮಾಡಿರುವ ಪತ್ರದಲ್ಲಿ ಸದರಿ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಬೇಕಾಗಿರುವುದರಿಂದ, ಈ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯವರ ಮುಖಾಂತರ ನಿರ್ವಹಿಸಲು ಅನುಮತಿ ನೀಡಲು ಕೋರಿ ಪತ್ರ ಬರೆದಿರುವುದರಿಂದ ಸದರಿ ಪ್ರಸ್ತಾವನೆಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ: 29–01–2014 ರ ಟಿಪ್ಪಣಿ.

| Sl. No. | Name of Work | Amount in Lakhs |
|---|---|---|
| 1. | Repairs & Painting to fencing, pathway, laying drain slab at entrance to the park in Ward No.128 | **5.00** |

**ನಿರ್ಣಯ:– ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ: 29–01–2014 ರ ಟಿಪ್ಪಣಿಯನ್ನು ಒಪ್ಪಿದೆ.**

ಕೊನೆಯದಾಗಿ, ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಮೇಲಿನ ವಿಷಯಗಳ ಬಗ್ಗೆ ಚರ್ಚಿಸಿರುವಂತೆ ಕ್ರಮ ವಹಿಸಲು, ಮಾನ್ಯ ಆಯುಕ್ತರು ಕಾರ್ಯಪ್ರವೃತ್ತರಾಗಬೇಕೆಂದು ಕೋರುತ್ತಾ, ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಸಹಿ/–
(ಎಂ.ಮುನಿರಾಜು)
ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು :–**

- ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಪೂಜ್ಯ ಮಾಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಾಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಬೆಂಗಳೂರು ನಗರದ ಎಲ್ಲಾ ಮಾನ್ಯ ರಾಜ್ಯ ಸಭಾ ಸದಸ್ಯರು, ಮಾನ್ಯ ಲೋಕಸಭಾ ಸದಸ್ಯರು, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಮತ್ತು ಮಾನ್ಯ ವಿಧಾನ ಸಭಾ ಸದಸ್ಯರುಗಳಿಗೆ ಕಳುಹಿಸಲಾಗಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರುಗಳಿಗೆ ಕಳುಹಿಸಲಾಗಿದೆ.
- ಗೌರವಾನ್ವಿತ ಸಮಿತಿಯ ಸದಸ್ಯರುಗಳಿಗೆ ಕಳುಹಿಸಲಾಗಿದೆ.
- ನಗರ ಪಾಲಿಕೆಯ 198 ಸದಸ್ಯರುಗಳಿಗೆ ಕಳುಹಿಸಲಾಗಿದೆ.
- ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- *ವಿಶೇಷ ಆಯುಕ್ತರು (ಯೋಜನೆ) ರವರಿಗೆ ಕಳುಹಿಸಲಾಗಿದೆ.*
- ಎಲ್ಲಾ ವಲಯ ಅಪರ/ ಜಂಟಿ ಆಯುಕ್ತರು (ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
- ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ *ರವರಿಗೆ ಕಳುಹಿಸಲಾಗಿದೆ.*
- *ಮುಖ್ಯ ಅಭಿಯಂತರರು(ಕೆರೆಗಳು–ಪರಿಸರಕೋಶ)ರವರಿಗೆ ಕಳುಹಿಸಲಾಗಿದೆ.*
- ಕಛೇರಿ ಪ್ರತಿ